sdmimd

# Kannada Prabha

**Date:** 03-02-2017 **Page No. 02**

Edition: Mysore **Language: English**

## ಎಸ್‌ಡಿಎಂನಲ್ಲಿ ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಸೆಂಟರ್ ಆಫ್ ಸ್ಪೋರ್ಟ್ಸ್ ಆ್ಯಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ಸಹಯೋಗದಲ್ಲಿ ನಗರದ ಎಸ್‌ಡಿಎಂ ಕಾಲೇಜು ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್ ಪ್ರೋಗ್ರಾಮ್ ಆರಂಭಿಸುತ್ತಿದೆ.

ಎಸ್‌ಡಿಎಂಐಎಂಡಿಯು ಕಳೆದ 23 ವರ್ಷಗಳಿಂದ ವ್ಯವಹಾರ ನಿರ್ವಹಣಾ ವಿಷಯ ಬೋಧಿಸುತ್ತಿದ್ದು, ಈಗ ಸೆಂಟರ್ ಆಫ್ ಸ್ಪೋರ್ಟ್ಸ್ ಆ್ಯಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್‌ಗೆ ಎರಡು ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದೆ ಎಂದು ಸೆಂಟರ್ ಆಫ್ ಸ್ಪೋರ್ಟ್ಸ್ ಅಂಡ್ ಮ್ಯಾನೇಜ್ಮೆಂಟ್ ಸ್ಟಡೀಸ್‌ನ ಸಂಸ್ಥಾಪಕ ಎನ್ರಿಕೋ ಪಿಪೆರ್ನೊ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೂರು ತಿಂಗಳ ಅವಧಿಯ ಸರ್ಟಿಫಿಕೇಟ್ ಪ್ರೋಗ್ರಾಮ್ ಇನ್ ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್ ಹಾಗೂ ಒಂಬತ್ತು ತಿಂಗಳ ಅವಧಿಯ ಪೋಸ್ಟ್ ಗ್ರಾಜುಯೇಟ್ ಪ್ರೋಗ್ರಾಮ್ ಇನ್ ಸ್ಪೋರ್ಟ್ಸ್ ಮ್ಯಾನೇಜ್ಮೆಂಟ್ ಕೋರ್ಸ್ ಯುವ ಪದವೀಧರರಿಗೆ ಮತ್ತು ಕ್ರೀಡೆಗಳ ಬಗ್ಗೆ ಆಸಕ್ತಿ ಹೊಂದಿರುವವರನ್ನು ಕ್ರೀಡಾ ನಿರ್ವಹಣೆ ಮತ್ತು ವ್ಯವಹಾರ ನಿರ್ವಹಣೆಗೆ ಸಿದ್ಧಗೊಳಿಸುವ ಉದ್ದೇಶದಿಂದ ಈ ಕೋರ್ಸ್ ಪ್ರಾರಂಭಗೊಳ್ಳಲಿವೆ. ಎಂದು ಅವರು ಹೇಳಿದರು.

ಈ ಶಿಕ್ಷಣವು ಜೂನ್‌ನಿಂದ ಆರಂಭಗೊಳ್ಳಲಿದ್ದು, 9 ತಿಂಗಳ ಕಾರ್ಯಕ್ರಮಕ್ಕೆ 2 ಲಕ್ಷ, 6 ತಿಂಗಳ ಶಿಕ್ಷಣಕ್ಕೆ 50 ಸಾವಿರ ಮತ್ತು 3 ತಿಂಗಳಿಗೆ 75 ಸಾವಿರ ನಿಗದಿಪಡಿಸಲಾಗಿದೆ. ಉತ್ತಮ ಕ್ರೀಡಾಪುಟಗಳನ್ನು ರೂಪಿಸಲು ಈ ತರಗತಿ ನೆರವಾಗಲಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ ನಿರ್ದೇಶಕಿ ಡಾ.ಎಚ್. ಗಾಯತ್ರಿ ಇದ್ದರು.

Launch of Sports Management Programme